**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ** 455/2022 **CW**-1 **PW**-1

**ಸಾಕ್ಷಿಯನ್ನು ದಿಃ** 04.06.2026 **ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ನಾಗೇಶ್ ಕೆ ಎನ್ |
| ತಂದೆಯ ಹೆಸರುಃ | ನಿಂಗಪ್ಪ |
| ವಯಸ್ಸುಃ | 45 ವರ್ಷ |
| ವೃತ್ತಿಃ | ವ್ಯವಸಾಯ |
| ವಾಸ ಸ್ಥಳಃ | ಡಿ ಕಾಳೇನಹಳ್ಳಿ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-2 ನನ್ನ ಹೆಂಡತಿ. ಚಾಸಾ-3 ಮತ್ತು ಚಾಸಾ-4 ನನ್ನ ತಂದೆ ತಾಯಿ. ಚಾಸಾ-5 ನನ್ನ ಅಣ್ಣ. ಚಾಸಾ-6 ಮತ್ತು ಚಾಸಾ-7 ಪರಿಚಯಸ್ಥರು. 1ನೇ ಆರೋಪಿ ನನ್ನ ಅಣ್ಣನ ಹೆಂಡತಿ. 2ನೇ ಆರೋಪಿ ನನ್ನ ಅಣ್ಣನ ಮಗ.

ದಿಃ 11.04.2022 ರಂದು ಬೆಳಗ್ಗೆ 9.00 ರಿಂದ 10.30 ರ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಚಾಸಾ-2 ರಿಂದ ಚಾಸಾ-4 ರವರು ಮನೆಯ ಹೊರಗೆ ಕುಳಿತಿದ್ದು, ನಾನು ಮನೆಯಿಂದ ಹೊರಬರುವಷ್ಟರಲ್ಲಿ ಆರೋಪಿತರು ಹಾಗೂ ಮಹಂತ್ ಕುಮಾರ್ ರವರು ಸದರಿಯವರ ಮೇಲೆ ಗಲಾಟೆ ಮಾಡುತ್ತಿದ್ದು, ಭತ್ತದ ಚೀಲವನ್ನು ಕಿತ್ತು ಎಸೆದು ಮನೆ ಬಿಟ್ಟು ಹೋಗದಿದ್ದರೆ ನಿಮ್ಮನ್ನು ಕೊಲೆ ಮಾಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ.

ಸಾಕ್ಷಿಗೆ ದೂರನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಾನು ಪೋಲೀಸರಿಗೆ ಯಾವುದೇ ಮರು ಹೇಳಿಕೆ ನೀಡಿಲ್ಲ. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 18.04.2022 ರಂದು ನಾನು ಪೋಲೀಸರ ಮುಂದೆ ಮರು ಹೇಳಿಕೆ ನೀಡಿದ್ದು ಅದರಲ್ಲಿ ಆರೋಪಿತರು 1 ಮತ್ತು 2 ಮಾತ್ರ ಗಲಾಟೆ ಮಾಡಿದ್ದು, 1ನೇ ಆರೋಪಿಯ ಮತ್ತೊಬ್ಬ ಮಗನಾದ ಮಹಂತ್ ಕುಮಾರ್ ರವರು ಗಲಾಟೆ ಸ್ಥಳದಲ್ಲಿ ಇರಲಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಮ್ಮ ಮನೆಯ ಯಾವುದೇ ವಸ್ತುವನ್ನು ಹೊಡೆದು ಹಾಕಿಲ್ಲ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ದಿಃ 18.04.2022 ರ ಮುಂದುವರೆದ ಹೇಳಿಕೆಯ ಭಾಗವಾದ "ಆಗ ಭಾಗ್ಯಲಕ್ಷ್ಮಿ ಮತ್ತು ------------------------------ವಸ್ತುಗಳು ನಾಶವಾಗಿರುವುದಿಲ್ಲ" ನ್ನು ಓದಿ ಹೇಳಲಾಗಿ ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

**ಈ ಸಮಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**